4. **ಕಾರ್ಯದರ್ಶಿಯವರ ವರದಿ**

ಕಾರ್ಯದರ್ಶಿ, ವಿಧಾನಮಂಡಲ:- ಅಧ್ಯಕ್ಷರೇ, ಕಳೆದ ಅಧಿವೇಶನದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಯವರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

5. **ವರದಿಗಳನ್ನು ಮಂಡಿಸುವುದು**

ಕಾರ್ಯದರ್ಶಿ ವಿಧಾನಮಂಡಲ:- ಅಧ್ಯಕ್ಷರೇ, ಬಳ್ಳಾರಿ ಜಿಲ್ಲ, ಹೂವಿನ ಹಡಗಲಿ ಪಟ್ಟಣದಲ್ಲಿ ಡಾ: ಬಿ.ಆರ್ ಅಂಬೇಡ್ಕರ್ ಪ್ರತಿಮೆ ಮತ್ತು ಭವನವನ್ನು ಧ್ವಂಸ ಮಾಡಿರುವ ಬಗ್ಗೆ ವಿಶೇಷ ವರದಿ ಮತ್ತು ರಾಜ್ಯದಲ್ಲಿ ಗ್ರಾನೈಟ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸಮಗ್ರವಾದ ತನಿಖೆಯನ್ನು ನಡೆಸಿ ಸದನಕ್ಕೆ ವರದಿ ಸಲ್ಲಿಸಲು ರಚಿಸಲಾಗಿರುವ ವಿಧಾನಮಂಡಲದ ಜಂಟಿ ಸದನ ಸಮಿತಿ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

5. **ಸಭೆಯ ಮುಂದಿಡಲಾದ ಕಾಗದ ಪತ್ರಗಳು**

I **ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ):- ಅಧ್ಯಕ್ಷರೇ, ಭಾರತ ಸಂವಿಧಾನದ 213 (2) (ಎ) ಅನುಚ್ಛೇದದ ಮೇರೆಗೆ**

1. 1996ನೇ ಕರ್ನಾಟಕ ವಿಧಾನ ಮಂಡಲದ ಸದಸ್ಯರುಗಳ ವೇತನ, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ಸಂಖ್ಯೆ 4ರ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 12-12-1996 ರಂದು ಹೊರಡಿಸಲಾದ ಡಿಪಿಎಎಲ್ 32 ಎಲ್‌ಜಿಎನ್ 96ನೇ ಕ್ರಮಾಂಕದ ಅಧಿಸೂಚನೆ;

1978ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ 8 (3)ನೇ ಕಲಮಿನ ಮೇರೆಗೆ;

2. ಕರ್ನಾಟಕ ರಾಜ್ಯ ಆರಕ್ಷಕ ಸೇವೆಗಳ (ವಿಶೇಷ ಅವಕಾಶದ ಮೂಲಕ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗೆ ಬಡ್ತಿ) (ವೈರಲೆಸ್) ನಿಯಮ 1996ಕ್ಕೆ ಸಂಬಂಧಿಸಿದಂತೆ ದಿನಾಂಕ 23-7-1996 ರಂದು ಹೊರಡಿಸಲಾದ ಡಿಪಿಎಆರ್ 85 ಎಸ್‌ಆರ್‌ಡಿ 95ನೇ ಕ್ರಮಾಂಕದ ಅಧಿಸೂಚನೆ;

3. 1996ನೇ ಇಸವಿಯ ಕರ್ನಾಟಕ ನಾಗರೀಕ ಸೇವಾ ನಿಯಮಕ್ಕೆ (ಅನುಕಂಪದ ಆಧಾರದ ಮೇಲೆ ನೇಮಕಾತಿ) ಸಂಬಂಧಿಸಿದಂತೆ ದಿನಾಂಕ 12-9-1996 ರಂದು ಹೊರಡಿಸಲಾದ ಡಿಪಿಎಆರ್ 100 ಎಸ್‌ಸಿಎ 95ನೇ ಕ್ರಮಾಂಕದ ಅಧಿಸೂಚನೆ;

4. 1994ನೇ ಇಸವಿಯ ಕರ್ನಾಟಕ ರಾಜ್ಯ ನಾಗರೀಕ ಸೇವಾ ನಿಯಮ (ಕಾರ್ಯನಿರ್ವಹಣಾ ವರದಿಗಳು)ದ ತಿದ್ದುಪಡಿಗೆ ಸಂಬಂಧಿಸಿದಂತೆ ದಿನಾಂಕ 28-10-1996 ರಂದು ಹೊರಡಿಸಲಾದ ಡಿಪಿಎಆರ್ 01 ಎಸಿಆರ್ 96ನೇ ಕ್ರಮಾಂಕದ ಅಧಿಸೂಚನೆ;